ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ,
ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು -560023.
ದೂರವಾಣಿ:080-22879336 ಇ-ಮೇಲ್:spmbeckar@gmail.com

ಸಂಖ್ಯೆ: ಬಿಇಸಿ/ಐಪಿಜಿ/110/2020-21 ದಿನಾಂಕ: 13.01.2021

## ಸುತ್ತೋಲೆ

**ಇವರಿಗೆ**

ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳು/
ಜಿಲ್ಲಾ ಶಸ್ತ್ರಚಿಕಿತ್ಸಕರು, ಬೆಂಗಳೂರು ನಗರ/
ಬೆಂಗಳೂರು ಗ್ರಾಮಾಂತರ/ಚಿತ್ರದುರ್ಗ/ದಾವಣಗೆರೆ/
ಕೋಲಾರ/ಶಿವಮೊಗ್ಗ/ಚಿಕ್ಕಬಳ್ಳಾಪುರ/ರಾಮನಗರ/
ತುಮಕೂರು/ಮೈಸೂರು/ಮಂಡ್ಯ/ಮಂಗಳೂರು(ದ.ಕ)/
ಚಾಮರಾಜನಗರ/ಕೊಡಗು/ಹಾಸನ/ಉಡುಪಿ/ಬೆಳಗಾಂ/
ಬಾಗಲಕೋಟೆ/ವಿಜಯಪುರ/ಧಾರವಾಡ/ಗದಗ/ಹಾವೇರಿ/
ಕಾರವಾರ(ಉ.ಕ.)ಚಿಕ್ಕೋಡಿ/ಗುಲ್ಬರ್ಗಾ/ಕೊಪ್ಪಳ/ಬೀದರ್/
ರಾಯಚೂರು/ಯಾದಗಿರಿ/ಪ್ರಾಂಶುಪಾಲರು, _______________ ತರಬೇತಿ ಕೇಂದ್ರ
_______________ಜಿಲ್ಲೆ/ವೈದ್ಯಕೀಯ ಅಧೀಕ್ಷಕರು, _______________ ಆಸ್ಪತ್ರೆ,
____________________ಜಿಲ್ಲೆ/ಸಹನಿರ್ದೇಶಕರು, _______________

ವಿಷಯ : 2021-22ನೇ ಸಾಲಿಗೆ ಸೇವಾನಿರತ ವೈದ್ಯರುಗಳ ದಂತ ಸ್ನಾತಕೋತ್ತರ ವ್ಯಾಸಂಗದ ಪ್ರವೇಶದ ಬಗ್ಗೆ.

ಉಲ್ಲೇಖ: ನ್ಯಾಷನಲ್ ಬೋರ್ಡ್ಆಫ್ಎಕ್ಸಾಮಿನೇಷನ್, (NEET-PG) NEET-2021, ಕೈಪಿಡಿ(ಬ್ರೋಚರ್), ದಿನಾಂಕ: 26.10.2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳ/ ಅಧಿಸೂಚನೆಯ ಪ್ರಕಾರ 2021-22ನೇ ಸಾಲಿಗೆ ದಂತ ಸೇವಾನಿರತ ವೈದ್ಯರುಗಳನ್ನು ಸ್ನಾತಕೋತ್ತರ ವ್ಯಾಸಂಗಕ್ಕೆ ನಿಯೋಜನೆ ಹೊಂದಲು ಪ್ರವೇಶ ಪರೀಕ್ಷೆಗೆ ಹಾಜರಾಗಲು ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರ, ನವದೆಹಲಿ ಇವರು ನಡೆಸುವ NEET-2020 (ವೈದ್ಯಕೀಯ) ಪ್ರವೇಶ ಪರೀಕ್ಷೆ 2021ರ ಬಗ್ಗೆ ಅಂತರ್ಜಾಲದ ಮೂಲಕ ಪ್ರಕಟಿಸಿರುವ ಕಿರುಹೊತ್ತಿಗೆಯನ್ನು NEET-2020 ವೆಬ್‌ಸೈಟ್ ವಿಳಾಸ **www.nbe.gov.in/neetpg** (Medical) ರಲ್ಲಿ ಪ್ರಕಟಿಸಿರುವಂತೆ ಎಲ್ಲಾ ಮಾಹಿತಿಗಳನ್ನು ಪರಿಶೀಲಿಸಲು ಸೂಚಿಸಿದೆ. ಹಾಗೂ ಉಲ್ಲೇಖಿತ ಸರ್ಕಾರದ ಆದೇಶದ ಪ್ರತಿಗಳನ್ನು ಮತ್ತು ಕಿರುಹೊತ್ತಿಗೆಯ ಪ್ರತಿಯನ್ನು ಹಾಗೂ ನಮೂನೆಗಳಲ್ಲಿ ನೀಡಬೇಕಾಗಿರುವ ಮಾಹಿತಿಯ ಬಗ್ಗೆ ಮಾದರಿ ನಮೂನೆ ಪ್ರತಿಗಳನ್ನು ಇಲಾಖೆಯ ವೆಬ್‌ಸೈಟ್ ವಿಳಾಸ www.karhfw.gov.inನಲ್ಲಿ ಪ್ರಕಟಿಸಿ ಮತ್ತು ಸಂಬಂಧಪಟ್ಟ ನಿಯಂತ್ರಣಾಧಿಕಾರಿಗಳ ಇ-ಮೇಲ್ ವಿಳಾಸಕ್ಕೂ ಸಹ ಕಳುಹಿಸಲಾಗಿರುತ್ತದೆ.

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 334 ಆರ್‌ಜಿಯು 2012, ದಿ:23.11.2013ರ ನಿಯಮದಲ್ಲಿ ನಿಗಧಿಪಡಿಸಿರುವಂತೆ ಪ್ರವೇಶ ಪರೀಕ್ಷೆಯ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಕ್ಕೆ ಅನ್ವಯವಾಗುವಂತೆ **5 ವರ್ಷಗಳ ಖಾಯಂ ಸೇವೆಯನ್ನು ಪೂರೈಸಿರತಕ್ಕದ್ದು**. **ಹಾಗೂ ಕೆಸಿಎಸ್‌ಆರ್ 61 ಪರಿಶಿಷ್ಠ 2ಎ ರಅನ್ವಯ 48 ವರ್ಷ ವಯೋಮಿತಿಯಲ್ಲಿರತಕ್ಕದ್ದು**.
   ಮೆಡಿಕಲ್ ಕೌನ್ಸಿಲ್ಆಫ್ಇಂಡಿಯಾ ಅಧಿಸೂಚನೆ ಸಂ: ಎಂಸಿಐ-18(1)/2018-ಎಂಇಡಿ/100818, ನವದೆಹಲಿ ದಿನಾಂಕ: 05.04.2018, ನಿಯಮ 9(4)ರನುಸಾರ ಹಾಗೂ ಸರ್ಕಾರದ ಅಧಿಸೂಚನೆ ಸಂ: ಆಕುಕ 54 ಆರ್‌ಜಿಯು 2019, ದಿನಾಂಕ: 08.03.2019ರನುಸಾರ ಮೂರು ವರ್ಷಗಳ ಸೇವೆಯನ್ನು ಪೂರೈಸಿರುವರ ವೈದ್ಯರುಗಳನ್ನು ವ್ಯಾಸಂಗಕ್ಕೆ ನಿಯೋಜಿಸಲಾಗಿದೆ. ಆದ್ದರಿಂದ ಕೆ.ಸಿ.ಎಸ್.ಆರ್ 61 **ಪರಿಶಿಷ್ಠ 2ಎರನ್ವಯ ಖಾಯಂ ಪೂರ್ವ ಸೇವಾವಧಿ ಘೋಷಣೆಯಾಗಿ 5 ವರ್ಷಗಳ ಸೇವೆಯನ್ನು ಪೂರೈಸಿರತಕ್ಕದು**

**ಹಾಗೂ 48 ವರ್ಷ**ವಯೋಮಿತಿಯಲ್ಲಿರಬೇಕೆಂಬ ನಿಭಂದನೆ ಇರುತ್ತದೆ. ನೀಟ್ ಪರೀಕ್ಷೆಯಲ್ಲಿ ಉನ್ನತ ವ್ಯಾಸಂಗಕ್ಕೆ ಅರ್ಹರಾಗುತ್ತಿರುವ ಸಂಖ್ಯೆ ಪ್ರತಿ ಶೈಕ್ಷಣಿಕ ವರ್ಷದಲ್ಲಿ ಇಳಿಮುಖವಾಗುತ್ತಿರುವ ಹಿನ್ನಲೆಯಲ್ಲಿ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಅಧಿಸೂಚನೆ ಸಂ: ಎಂಸಿಐ-18(1)/2018-ಎಂಇಡಿ/100818, ನವದೆಹಲಿ ದಿ: 05.04.2018, ನಿಯಮ 9(4)ರನುಸಾರ ಹಾಗೂ ಸರ್ಕಾರದ ಅಧಿಸೂಚನೆ ಸಂ: ಆಕುಕ 54 ಆರ್‌ಜಿಯು 2019, ದಿನಾಂಕ: 08.03.2019ರನುಸಾರ ನಿಗಧಿತ ನಮೂನೆಯಲ್ಲಿ ಅರ್ಜಿಯನ್ನು ಅಹ್ವಾನಿಸಬಹುದಾಗಿದೆ.

2. **ಪ್ರವೇಶ ಪರೀಕ್ಷೆಯ ಅರ್ಜಿಯನ್ನು ಸಲ್ಲಿಸುವಾಗ ಖಾಯಂ ಪೂರ್ವ ಸೇವಾವಧಿ ಘೋಷಣೆಯಾಗಿರುವುದು ಕಡ್ಡಾಯವಾಗಿರುತ್ತದೆ. ಪರಿಶೀಲನೆಗಾಗಿ ಖಾಯಂಪೂರ್ವ ಸೇವಾವಧಿ ಘೋಷಣೆಯ ದೃಢೀಕೃತ ಸರ್ಕಾರಿ ಆದೇಶದ ಪ್ರತಿಯನ್ನು** ಲಗತ್ತಿಸುವುದು ಕಡ್ಡಾಯವಾಗಿರುತ್ತದೆ.
3. **ಇಲಾಖಾ ವಿಚಾರಣೆ ಬಾಕಿ ಇದ್ದು, ದೋಷಾರೋಪಣೆ ಪಟ್ಟಿ ಜಾರಿಯಾಗಿರುವಂತಹ ಸೇವಾನಿರತ ವೈದ್ಯರುಗಳ ಪ್ರವೇಶ ಪರೀಕ್ಷೆಯ ಅರ್ಜಿಯನ್ನು ಶಿಫಾರಸ್ಸು ಮಾಡತಕ್ಕದ್ದಲ್ಲ. ಇಲಾಖಾ ವಿಚಾರಣೆ ಬಾಕಿ ಇಲ್ಲದಿರುವ ಬಗ್ಗೆ ನೀಡಿರುವ ನಮೂನೆ ಪತ್ರದಲ್ಲಿ ದೃಢೀಕರಿಸಿ ಸಲ್ಲಿಸತಕ್ಕದ್ದು.**
4. ಅನಧೀಕೃತ ಗೈರು ಹಾಜರಿಯಾಗದಿರುವ ಬಗ್ಗೆ ದೃಢೀಕೃತ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.
5. ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ ದೃಢೀಕೃತ ಪ್ರತಿ.
6. ಪಿಯುಸಿ ಅಂಕಪಟ್ಟಿ ದೃಢೀಕೃತ ಪ್ರತಿ.
7. ಬಿಡಿಎಸ್ ವ್ಯಾಸಂಗ ಪೂರೈಸಿದ ಬಗ್ಗೆ ಕೆಎಂಸಿ ವತಿಯಿಂದ ನೀಡಿರುವ ದೃಢೀಕೃತ ಪ್ರಮಾಣ ಪತ್ರ.
8. ಬಿಡಿಎಸ್ ವ್ಯಾಸಂಗ ಪೂರೈಸಿದ ಪದವಿಯ ದೃಢೀಕೃತ ಪ್ರಮಾಣ ಪತ್ರ.
9. ಈಗಾಗಲೇ ಸೇವಾನಿರತ ಕೋಟಾದಡಿಯಲ್ಲಿ ಯಾವುದೇ ತಜ್ಞತೆಯಲ್ಲಿ **ಸ್ನಾತಕೋತ್ತರ/ಡಿಪ್ಲೊಮೊ ವ್ಯಾಸಂಗ ಮಾಡಲಾಗಿದೆಯೇ? ವ್ಯಾಸಂಗ ಪೂರೈಸಿದ ಬಗ್ಗೆ ದೃಢೀಕೃತ ಪ್ರತಿ** ಸಲ್ಲಿಸತಕ್ಕದ್ದು.
10. ಪ್ರವೇಶ ಪರೀಕ್ಷೆಯ ಅರ್ಜಿ ಸಲ್ಲಿಸುವ ವೈದ್ಯರು ಈಗಾಗಲೇ ಸೇವಾನಿರತ ಕೋಟಾದಡಿಯಲ್ಲಿ ಪ್ರಥಮ ಬಾರಿಗೆ ನಿಯೋಜನೆಗೊಂಡು ವ್ಯಾಸಂಗ ಪೂರೈಸಿರುವರೇ ಎಂಬ ಬಗ್ಗೆ ಪರಿಶೀಲಿಸಿ ಮಾಹಿತಿಒದಗಿಸತಕ್ಕದ್ದು.
11. ಸರ್ಕಾರದ ಆದೇಶದನುಸಾರ ಸೇವಾನಿರತ ಕೋಟಾದಡಿಯಲ್ಲಿ ಲಭ್ಯವಾಗುವ ಸೀಟುಗಳಿಗೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸೇವಾನಿರತ ವೈದ್ಯರುಗಳನ್ನು ನಿಯೋಜಿಸುವ ಬಗ್ಗೆ ಪ್ರವೇಶ ಪರೀಕ್ಷೆಯ ಅರ್ಜಿಗಳನ್ನು ಇಲಾಖೆಯ ಮುಖಾಂತರ ಸಲ್ಲಿಸಬೇಕಾಗಿರುವುದರಿಂದ ಮೇಲೆ ತಿಳಿಸಿರುವಂತೆ ವೆಬ್‌ಸೈಟ್ ಮತ್ತು ಇ-ಮೇಲ್‌ನಲ್ಲಿ ಲಭ್ಯವಿರುವ ಮಾಹಿತಿಯನ್ನು ಪರಿಶೀಲಿಸಿ ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸೇವಾನಿರತ ವೈದ್ಯರುಗಳ ಪೈಕಿ ಸ್ನಾತಕೋತ್ತರ ವ್ಯಾಸಂಗಕ್ಕೆ ತೆರಳಲು ಇಚ್ಛಿಸುವ ವೈದ್ಯರುಗಳ ಅರ್ಜಿ ನಮೂನೆ ಮತ್ತು ಸಂಬಂಧಪಟ್ಟ ದಾಖಲೆ ಪ್ರತಿಗಳನ್ನು ದ್ವಿ-ಪ್ರತಿಯಲ್ಲಿ ದೃಢೀಕರಿಸಿ ಸಲ್ಲಿಸಲು ಸೂಚಿಸಿದೆ.
12. **ಕಿರುಹೊತ್ತಿಗೆಯಲ್ಲಿ ಪ್ರಕಟಿಸಿರುವಂತೆ ಸಂಬಂಧಪಟ್ಟ ದಾಖಲಾತಿಗಳನ್ನು ತಮ್ಮ ಹಂತದಲ್ಲಿಯೇ ಪರಿಶೀಲಿಸಿ ಸೂಕ್ತ ದಾಖಲೆಗಳು ಸಲ್ಲಿಸದೇ ಇರುವಂತಹ ಯಾವುದೇ ಪ್ರವೇಶ ಪರೀಕ್ಷೆಯ ಅರ್ಜಿಗಳನ್ನು ತಮ್ಮ ಹಂತದಲ್ಲಿಯೇ ತಿರಸ್ಕರಿಸಲು ಸೂಚಿಸಿದೆ.** ಹಾಗೂ ಸೂಕ್ತ ದಾಖಲೆಗಳನ್ನು ಪರಿಶೀಲಿಸದೇ ಸಲ್ಲಿಸುವ ಪ್ರವೇಶ ಪರೀಕ್ಷೆಯ ಅರ್ಜಿಗಳ ಬಗ್ಗೆ ಸಂಬಂಧಪಟ್ಟ ನಿಯಂತ್ರಣಾಧಿಕಾರಿಗಳನ್ನು ಮತ್ತು ಸಂಬಂಧಪಟ್ಟ ವೈದ್ಯರುಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಅವರ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದೆಂದು ಸೂಚಿಸಿದೆ.
13. ಸರ್ಕಾರದ ಆದೇಶದ ಪ್ರಕಾರಗುತ್ತಿಗೆ ಸೇವೆಯನ್ನು ಮತ್ತು ಗ್ರಾಮೀಣ ಕೃಪಾಂಕದಡಿ ನೇಮಕಗೊಂಡು ತದ ನಂತರ ಗುತ್ತಿಗೆ ಆಧಾರದ ಮೇಲೆ ಮುಂದುವರೆದಿದ್ದು, ಈ ಎರಡು ಸೇವೆಗಳ ನಡುವೆ ಯಾವುದೇ **ಸೇವಾ ವಿಚ್ಛಿನ್ನತೆ (No Break in Service)** ಆಗಿಲ್ಲದೇ ಇರುವುದನ್ನು ದೃಢೀಕರಿಸುವ ಷರತ್ತಿಗೊಳಪಟ್ಟು ಪರಿಗಣಿಸುವ ಬಗ್ಗೆ ಆದೇಶವಿರುವುದರಿಂದ ಇದಕ್ಕೆ ಸಂಬಂಧಿಸಿದಂತೆ ನಿಗಧಿತ ನಮೂನೆಯನ್ನು ಈ ಪತ್ರದೊಂದಿಗೆ ಅಡಕಗೊಳಿಸಿದೆ.